ಮೆಹಬೂಬ ಮುಲ್ತಾನಿ

ಕಲೆ: ನಂಜುಂಡಸ್ವಾಮಿ

ಕೊನೆಯ ದಿನದ ಪ್ರಾರ್ಥನೆ

ತುಟಿಯ ತುದಿಗೆ
ನಿಂತಿದೆ ಕೊನೆಯ ದಿನದ ಪ್ರಾರ್ಥನೆ

ಪ್ರಾರ್ಥನೆಯಿಂದ ಏನೆಲ್ಲ ಆಗುವುದು
ದೊಡ್ಡ ಪರ್ವತ ಚಿಕ್ಕದಾಗುವುದು
ವಿಶಾಲ ಸಮುದ್ರ ಬೊಗಸೆ ತುಂಬುವುದು
ಆಸೆಗಳು ತುಂಬಿಕೊಳ್ಳುವವು
ದುಃಖದ ಹರಿವಾಣ ಬರಿದಾಗುವುದು

ಕೊನೆಯ ದಿನದ ಪಾರ್ಥನೆ
ತುಟಿ ದಾಟದೆ ಮನದಲ್ಲಿಯೇ ಉಳಿಯುತ್ತಿದೆ
ಮೇಲಿನ ಯಾವ ವಿದ್ಯಮಾನಗಳೂ ಜರುಗುತ್ತಿಲ್ಲ

ಜಗತ್ತಿನ ಯಾವುದೋ ಮೂಲೆಯಲ್ಲಿ
ಯಾರೋ ಪ್ರಾರ್ಥನೆಯಲ್ಲಿರಬಹುದು
ಜಗದ ಪಾಪದ ಪಟ್ಟಿ ಕಡಿಮೆ ಮಾಡಲು

ಇನ್ನೊಂದು ಮೂಲೆಯಲ್ಲಿ
ಕೆಲವರು ದಿನಪೂರ್ತಿ ಕೈ ಮುಗಿದು ಪ್ರಾರ್ಥಿಸುತ್ತಿದ್ದಾರೆ
ಪುಣ್ಯ ಮಾತ್ರ ಅವರಿಗಿರಲಿ ಪಾಪ ಜಗವ ಆವರಿಸಲಿ
ಎಂದು

ನನ್ನ ಪ್ರಾರ್ಥನೆಗೆ ಇಲ್ಲಿ ಜಾಗವೂ ಇಲ್ಲ
ಅದು ತುಟಿಯಿಂದ ಹೊರಬರುವುದೂ ಇಲ್ಲ